ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 4, September-October 2022, Pp. 65- 69
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಶರಣರ ತಪೋಭೂಮಿ ಸಗರನಾಡು

**ಕರೆಣ್ಣ ಭೀಮಣ್ಣ ದೇವಪುರ***
*ಸಂಶೋಧನಾ ವಿದ್ಯಾರ್ಥಿ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

***Abstract:***

*ಕರ್ನಾಟಕದ ಭೀಮಾ ಮತ್ತು ಕೃಷ್ಣಾ ನದಿಗಳ ನಡುವಿನ ಪ್ರದೇಶಕ್ಕೆ ಸಗರನಾಡು ಕರೆಯುತ್ತಾರೆ. ಹನ್ನೆರಡನೇ ಶತಮಾನ ಪೂರ್ವದ ಕರ್ನಾಟಕವೆಂದರೆ ಉತ್ತರ ಭಾರತದ ಬೌದ್ಧ, ಜೈನ, ವೈದಿಕ ಶೈವವೆಂಬ ವಲಸೆ ಧರ್ಮಗಳ ಪ್ರಭುತ್ವದ ಕಾಲವಾಗಿದ್ದಿತು. ಈ ಹೊತ್ತಿಗೆ ಬೌದ್ಧ ಧರ್ಮ ಬಹುಮಟ್ಟಿಗೆ ನಾಶವಾಗಿದ್ದಿತು. ಜೈನ ಧರ್ಮ ಜೀರ್ಣವಾಗಿದ್ದಿತು. ಶೈವ ಧರ್ಮವು ವೈದಿಕ ಪ್ರಭಾವಕ್ಕೆ ಒಳಗಾಗಿದ್ದಿತು. ಹೀಗಾಗಿ 12ನೇ ಶತಮಾನದಲ್ಲಿ ಸ್ಥಳೀಯರು, ದಲಿತರು, ಶ್ರಮಿಕರು, ಮಹಿಳೆಯರು ಹೀಗೆ ಅನೇಕ ವರ್ಗಗಳ ಸಂಘಟನೆಗಳು ವಿನೂತನ ಶೈಲಿಯ ಆಧ್ಯಾತ್ಮಿಕ ಸಾಮಾಜಿಕ ಸಿದ್ಧಾಂತಗಳ ಮೂಲಕ ಪ್ರತಿಭಟಿಸಿದರು. ಭಾರತವು ವರ್ಣಭೇದ, ವರ್ಗಭೇದ, ಲಿಂಗಭೇದ ಹೀಗೆ 'ಭೇದ ಸಂಸ್ಕೃತಿ'ಯ ರಾಷ್ಟ್ರವಾಗಿದೆ. ಭೇದ ಸಂಸ್ಕೃತಿಯ ಸಮಾಜದಲ್ಲಿ ಆತ್ಮಕಲ್ಯಾಣದ ಪ್ರಯೋಗ'ಗಳು ಜರುಗಬಹುದೇ ಹೊರತು ಸಮಾಜಕಲ್ಯಾಣಗಳ 'ಆಂದೋಲನ'ಗಳು ಜರುಗಲಾರವು ಆದರೆ ಶಿವಶರಣರು ಮಾತ್ರ ಈ ಎರಡೂ ಬಗೆಯ ಕಲ್ಯಾಣದ ವಿಷಯವಾಗಿ ಅನೇಕ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ.*

**Keywords:** *ಶಿವಶರಣರು, ಶರಣ ಸಾಹಿತ್ಯ, ಸಗರನಾಡು, ತಪೋಭೂಮಿ, ಕಲ್ಯಾಣ, ವಚನಗಳು, ಶೈವರು.*

## ಪೀಠಿಕೆ

ಗುರು–ಲಿಂಗ–ಜಂಗಮ ಇವು ಶರಣ ಸಿದ್ಧಾಂತದ ಮೂಲತತ್ವಗಳಾಗಿವೆ. ಇಲ್ಲಿ ವ್ಯಕ್ತಿಯೇ ಗುರುವಾಗಬೇಕು. ಅಂದರೆ ಜ್ಞಾನಿಯಾಗಬೇಕು. ಲಿಂಗವಾಗಬೇಕು–ಅಂದರೆ ಜ್ಞಾನವನ್ನು ಕ್ರಿಯೆಯಲ್ಲಿ ಅಳವಡಿಸಿಕೊಳ್ಳಬೇಕು. ಜಂಗಮವಾಗಬೇಕು ಅಂದರೆ ಜ್ಞಾನ ಕ್ರಿಯಾ ಸಮನ್ವಯ ವ್ಯಕ್ತಿತ್ವವನ್ನು ಸಾಮಾಜೀಕರಣಗೊಳಿಸಿಕೊಳ್ಳಬೇಕು. ಇದನ್ನೆ ಇನ್ನೊಂದು ರೀತಿಯಲ್ಲಿ ಅನುಭಾವ, ಆನಂದ, ಸಮರಸವೆಂದು ವಿಕಾಸವಾಗುವಲ್ಲಿ ಅವನು ಕ್ರಮವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಹಂತಗಳನ್ನೇರಿ ಬೆಳೆಯುತ್ತಾನೆ. ಈಗ ಭಕ್ತ ಮಹೇಶ್ವರಸ್ಥಲದಲ್ಲಿ ಗುರು(ಜ್ಞಾನಿ)ವಾಗುತ್ತಾನೆ. ಪ್ರಸಾದಿ–ಪ್ರಾಣಲಿಂಗಿ ಸ್ಥಲಗಳಲ್ಲಿ ಲಿಂಗ–(ಕ್ರಿಯಾ), ಜಂಗಮ (ಜ್ಞಾನ–ಕ್ರಿಯಾ–ಸಾಮರಸ್ಯ) ವಾಗುತ್ತಾನೆ. ಇದನ್ನೆ 'ಲಿಂಗವಿಡಿದು ಲಿಂಗಸಿದ್ಧಿ' ಎನ್ನುತ್ತಾರೆ. ಶರಣರು ಹೀಗೆ ಲಿಂಗವ್ಯಕ್ತಿತ್ವವನ್ನು ಪಡೆದವನು, ಈಗ ತನ್ನ ಜೀವನದ ಸಕಲ ವ್ಯಾಪಾರವನ್ನು ಲಿಂಗಭಾವದಿಂದ ಅನುಭವಿಸುತ್ತಾರೆ.

ಶರಣರು ಕಟ್ಟಿದ ಸಮಾಜದಲ್ಲಿ ಉಂಬಲ್ಲಿ ಉಡುವಲ್ಲಿ ಕುಲವಿತ್ತೆಂಬುದು ಹೋಯಿತು, ಕೊಂಬಲ್ಲಿ ಕೊಡುವಲ್ಲಿ ಕುಲವನರಸುವುದು ಹೋಯಿತು, 'ತನ್ನೆಡೆಯಲ್ಲಿ ಕತ್ತೆ ಸತ್ತುಬಿದ್ದುದನರಿಯದೆ ಪರರೆಡೆಯಲ್ಲಿ ನೊಣವನಾರಿಸುವ ಮರುಳುತನ ಮಾಯವಾಯಿತು. ಲೋಕದ ಡೊಂಕ' ತಿದ್ದುವ ಬುದ್ಧಿ ಹೋಗಿ ತಮ್ಮ ತಮ್ಮ ಮನದ ಡೊಂಕು ತಿದ್ದುಕೊಳ್ಳುವ ಬುದ್ಧಿ ಬೆಳೆಯಿತು.

***Please cite this article as:*** ಕರೆಣ್ಣ ಭೀಮಣ್ಣ ದೇವಪುರ. (2022). ಶರಣರ ತಪೋಭೂಮಿ ಸಗರನಾಡು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(4), 65–69.

"ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತಾರವಾಗಿ ಹರಡಿದ ನಾಡು ಕರುನಾಡು ಎಂದು ಹೆಮ್ಮೆಯ ಚಕ್ರವರ್ತಿ ನೃಪತುಂಗನ ಕಾಲದಿಂದಲೂ ಆ ಮಾತು ಬಳಕೆಯಲ್ಲಿದೆ. ಅದೇ ರೀತಿಯಾಗಿ ಕರ್ನಾಟಕದ ಭೀಮಾ ಮತ್ತು ಕೃಷ್ಣಾ ನದಿಗಳ ನಡುವಿನ ಪ್ರದೇಶಕ್ಕೆ ಸಗರನಾಡು ಕರೆಯುತ್ತಾರೆ"[1]. ಕನ್ನಡ ಸಾಹಿತ್ಯಕ್ಕೆ ಮೂಲ ಬೇರು ಈ ಸಗರನಾಡಗಿದ್ದು. ಇದನ್ನು ಇಂದಿಗೂ ಕೂಡ ಶರಣರ ತಪೋಭೂಮಿ ಸಗರನಾಡು ಎಂದು ಕರೆಯುವ ಪ್ರತೀತಿ ಇದೆ. ಕನ್ನಡ ನಾಡಿನ ಸೀಮೆ (ರೇಖಾ) ವಿಶಾಲ ಹಾಗೂ ಹಲವಾರು ವೈಶಿಷ್ಟ್ಯತೆಗಳಿಂದ ಸುಸಂಪನ್ನವಾದ ನಾಡಾಗಿದೆ. ಶೂರರು ಜನಿಸಿದ ನಾಡು, ತ್ಯಾಗಿಗಳ ಬೀಡು ಎಂಬುದಕ್ಕೆ ಎರಡು ಮಾತಿಲ್ಲ, ಕವಿಯ, ಕಲಾವಿದನ, ಸಂಶೋಧಕನ, ಆಧ್ಯಾತ್ಮ ಜೀವಿಗಳ ಕಣ್ಣಿಗೆ ಸತ್ಯ ಶಿವ, ಸೌಂದರ್ಯ ರೂಪದಿಂದ ಕಂಡಿದೆ. ಇಂಥ ಸುಸಂಸ್ಕೃತ ನಾಡಿನ ಗಂಡು ಮೆಟ್ಟಿನ ನಾಡು ಸಗರನಾಡು.

ಈ ನಾಡಿಗೆ 'ಸಗರನಾಡು' ಎಂದು ಹೆಸರು ಬಂದದ್ದು ಪುರಾಣಕಾಲದಿಂದ ಎಂದು ಹೇಳುವಲ್ಲಿ ಯಾವ ಸಂಶಯವೂ ಪಡಬೇಕಾಗಿಲ್ಲ. ಪುರಾಣ ಪ್ರಸಿದ್ಧನಾದ ಮಹಾಬಲಶಾಲಿಯೂ, ಉನ್ನತ ಮಹಿಮಾಸಂಪನ್ನನೂ ಪರಮಧಾರ್ಮಿಕನೂ ಸಗರ ಚಕ್ರವರ್ತಿ 'ಸಗರ'ವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು ಎಂಬುದು ಪ್ರತೀತಿ. ಈಗ ಬೆಟ್ಟದ ಮೇಲೆ ಕಾಣುತ್ತಿರುವ ಕೋಟೆ ಆದಿಲ್‌ಶಾಹಿ ಮನೆತನದವರು ಕಟ್ಟಿಸಿದ ಕೋಟೆಗಳಲ್ಲ. ಮೊದಲು ಸಗರ ಚಕ್ರವರ್ತಿ ಕಟ್ಟಿಸಿದ್ದನ್ನು. ವಿಜಯನಗರ ಅರಸರು ಅದಕ್ಕೊಂದು ಹೊಸರೂಪ ಕೊಟ್ಟರೆಂದೂ, ಮೊಘಲ ಚಕ್ರವರ್ತಿ ಔರಂಗಜೇಬನ ಕ್ರೂರ ದಾಳಿಗೆ ತುತ್ತಾಗಿ ಶಿಥಿಲವಾದ, ಅಲ್ಲಲ್ಲಿ ಹಾಳುಬಿದ್ದ ಕೋಟೆಯ ವಿಜಾಪುರದ ಬಾದಶಾಹರು ಪುನರ್ನಿರ್ಮಿಸಿದರೆಂದೂ ತಿಳಿದುಬರುತ್ತದೆ. ಕೋಟೆಯಲ್ಲಿ ಕಾಣಬರುವ ಹಿಂದೂ ದೇವಸ್ಥಾನಗಳೇ ಇದಕ್ಕೆ ಸಾಕ್ಷಿಯಾಗಿದೆ.

***ಸಮಭೂಮಧ್ಯ ರೇಖಾಯಾಂ***
***ಶ್ರೀ ಶೈಲಸ್ಯ ಪಶ್ಚಿಮೆ***
***ಕೃಷ್ಣವೇಣ, ಭೀಮರತ್ಯ***
***ಮಧ್ಯ ಜಗತಿ ಪಾವನೆ***
***ಸೂರ್ಯವಂಶ ಕುಲೋತ್ಪನ್ನ***
***ಸಗರೇಣ್ಯ ವಿನಿರ್ಮಿತಂ***
***ಸಗರಂ ನಗರಂ ನಾಮ***
***ಜಯತ್ಯಾದ್ಯಾಪಿ ವಿಶ್ರುತಂ:***
***ಭೀಮಾ ದಕ್ಷಿಣ ದಿಗ್ಭಾಗೆ ಪರ್ವತೋಸ್ತಿ***
***ಮನೋರಮಾ:***
***ಸಗರಾದ್ರಿತಿ ಖ್ಯಾತ: ಹೇಮಕೂಟಸ್ಯ ಸೋದರ:*** [2]

ಸಗರನಾಡು ಎಂಬ ಹೆಸರು ಬಳಕೆಗೆ ಬಂದದ್ದು ಇತಿಹಾಸ ಕಾಲದಿಂದ ಸಗರ ಚಕ್ರವರ್ತಿ ಹೆಸರಿನಿಂದಲೇ ಪ್ರಸಿದ್ಧವಾದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಜೇವರ್ಗಿ, ಶಹಾಪುರ,

[1] ಸಗರನಾಡು ಸಂಸ್ಕೃತಿ ಸಮೀಕ್ಷೆ, ಪು.ಸಂ.17
[2] ಅದೇ. ಪು.ಸಂ.18

ಸುರಪುರ, ಈ ಮೂರು ತಾಲೂಕಗಳನ್ನೊಳಗೊಂಡಿರುವುದರ ಜೊತೆಗೆ ಮುದ್ದೇಬಿಹಾಳ ಮತ್ತು ಸಿಂದಗಿ ತಾಲೂಕುಗಳವರೆಗೆ ಸಗರನಾಡಿನ ವ್ಯಾಪ್ತಿ ಕಾಣುತ್ತೇವೆ.

***"ಚತುರ್ದಿಕ್ಷು ಮಹಾದ್ವಾರೈಶ್ಚತುರ್ಭಿಶ್ಚ ಸಮಾವೃತಂ ।***

***ಪ್ರಖ್ಯಾತಂ ಭೂತಲೇ ನಾಮ್ನಾ ಸಾಗರಪುರೀಚ ॥***

***ಗಿರಿಥಸ್ಥಿತೇ ತಸ್ಮಿನ್ ಪುರೇ ಸೂರ್ಯಾನ್ವಯೋಭವಃ ॥***

***ಅಸೀದ್ರಾಜಾ ಮಹಾನ್ನಾಮ್ನಾ ಸಗರಾಖ್ಯ ಪ್ರತಾಪವಾನ್"[3] ॥***

ಎಂದು ತಿಳಿಸುತ್ತದೆ. ಶ್ಲೋಕದ ಮೇಲಿಂದ ಸಗರಾದ್ರಿಯ ಕೆಳಗಡೆಯಿರುವ ಸಾಗರಪುರಿ, ಸಗರಪುರದಲ್ಲಿ ಸೂರ್ಯವಂಶದ ಅರಸನಾದ, ಸಗರ ರಾಜನು ಭೂತಲದಲ್ಲಿ ಪ್ರಖ್ಯಾತನಾಗಿ ಚತುರಂಗ ಬಲ, ಮಂತ್ರಿಗಳು ಸೇವಕರು ಮುಂತಾದವರಿಂದ ಕೂಡಿಕೊಂಡು ಸಕಲೈಶ್ವರ್ಯ ಸಂಪನ್ನನಾಗಿ ರಾಜ್ಯವನ್ನಾಳುತ್ತಿದ್ದನೆಂಬುದು ತಿಳಿಯುತ್ತದೆ.

ಅಲ್ಲದೆ ದ್ರಾವಿಡ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುವ ಪ್ರಾಗೈತಿಹಾಸಿಕ, ಕುರುಹುಗಳು ಪ್ರಾಚೀನ ಅವಶೇಷಗಳು ಈ ತಾಲೂಕಿನ ವಿಭೂತಿಹಳ್ಳಿ, ರಸ್ತಾಪುರ, ಮದ್ದರಕಿ, ಮುಂತಾದ ಗ್ರಾಮಗಳ ಸುತ್ತಲೂ ದೊರಕಿದ್ದು ಈ ತಾಲೂಕಿನ ಇತಿಹಾಸ ಮೂರು ಸಾವಿರ ವರ್ಷಗಳ ಆಚೆಗೆ ಕೊಂಡೊಯ್ಯುತ್ತದೆ.

***"ಊರ ಮುದನೂರೊಳಗೆ ಜನಿಸಿದ ಸಾರ***

***ಶರಣನುದಾಸಿಮಯ್ಯನ ಘೋರ***

***ಕುಲ ಕಕ್ಕಯ್ಯನಾ ಕಕ್ಕೇರಿಪುರವಾಸಿ***

***ವರ ಕವೀಶ್ವರ ಪಂಪರನ್ನರ ಸರಿದೊರೆಯು***

***ಲಕ್ಷ್ಮೀಶ ಕವಿವರನಿರುವ ದೇವಪುರ ದೊಡೆಯ ಸಿಂಹರಿಗೆರಗಿ ತೊದಲುವೆನು"[4]***

ಪ್ರತಿಯೊಂದು ನಾಡಿಗೂ ಅದರ ಸಂಸ್ಕೃತಿಯ ಜೀವಾಳ, ಸಂಸ್ಕೃತಿ ಇಲ್ಲದ ನಾಡು ಬರಡು ಸಗರನಾಡಿನ ಧಾರ್ಮಿಕ ಸ್ಥಿತಿಗತಿಗಳು ಹಿರಿದಾದವು, ಇದು ಸರ್ವಧರ್ಮ ಸಮನ್ವಯದಿಂದ ಬಾಳಿದ ನಾಡಾಗಿದೆ. ಶರಣರು, ದಾಸರು, ಸಂತರು, ಕವಿಗಳು, ಕಲಾವಿದರು, ಮಠಾಧೀಶರು, ಜ್ಯೋತಿಷಿಗಳು ಮುಂತಾದವರಿಗೆ ಜನ್ಮ ಕೊಟ್ಟ ನಾಡಾಗಿದೆ. ಈ ನಾಡಿನಲ್ಲಿ ಧಾರ್ಮಿಕ ಜೀವನದ ಉದಾತ್ತ ಆದರ್ಶಗಳು ನುಸುಳಿದಾಗ ಸಗರನಾಡಿನಲ್ಲಿ ಮಹಾ ವ್ಯಕ್ತಿಗಳ ತ್ಯಾಗ-ತೇಜಸ್ಸು ಹೊರಬಂದದ್ದು ಮತ್ತು ಈ ನಾಡಿನಲ್ಲಿ ಹಿಂದೂ ಮುಸ್ಲಿಂ ಕ್ರೈಸ್ತ ಜೈನ್ ಮುಂತಾದ ಧರ್ಮದ ಶರಣರನ್ನು ಕಾಣುತ್ತೇವೆ. ಮಹಾಕವಿ ದೇವಪುರ ಲಕ್ಮೀಶ, ಮುದನೂರಿನ ಜೇಡರ ದಾಸಿಮಯ್ಯ, ಕೆಂಭಾವಿ ಭೋಗಣ್ಣ, ಕೊಡೆಕಲ್ ಬಸವಣ್ಣ, ತಿಂಥಣಿ ಮೋನಪ್ಪಯ್ಯ, ಕಡಕೋಳ ಮಡಿವಾಳಪ್ಪ, ಕೋಡಗುಂಳಿ ಕೇಶರಾಜ, ಚರಬಸವೇಶ್ವರ, ಬಿಜಾಸಪುರದ ವೆಂಕಣ್ಣಯ್ಯ, ಗೊಗ್ಗವೆ, ಕಕ್ಕಯ್ಯ, ಕೊಡಲೂರುಬಸವಲಿಂಗಪ್ಪ, ಓಲೆಕೇತಯ್ಯ, ಕಾಖಂಡಗಿಯ ಮಲ್ಲಾರಾಧ್ಯರು, ವಿಶ್ವರಾಧ್ಯರು, ತ್ರಿವಿಕ್ರಮನಾರದ, ಸಮಗಾರಹರಳಯ್ಯ, ಕಲ್ಯಾಣಮ್ಮ, ಶೀಲವಂತ ಹಾವಿನಾಳಕಲ್ಲಯ್ಯ, ಖೈನೂರು ಕೃಷ್ಣಪ್ಪ, ರಾಮಪುರ ಬಕ್ಕಪ್ಪ ಆಂದೇಲಿಯ ಕರುಣೇಶ್ವರ, ಕನ್ಯಾಕೊಳ್ಳುರಿನ ಚೆನ್ನಮ್ಮ ಮಾಗಣಗೇರಿ ವಿಶ್ವರಾದ್ಯರು ಜೇವರ್ಗಿ ಷಣ್ಮುಖಶಿವಯೋಗಿಗಳು,

---

[3] ಗಿರಿಸಂಪದ ಪು.ಸಂ.256

[4] ಅದೇ. ಪು.ಸಂ.250

ಕುಳಗೇರಿಖಾದರ್‌ಲಿಂಗ, ಚಂದಾಸಾಹೇಬ್‌ಗೋಗಿ ಸಂಗಮನಾಥ, ರಸ್ತಾಪುರ ಭೀಮಕವಿ, ಮರಳಶಂಕರಹೆಗ್ಗಣದೊಡ್ಡಿ, ಯಲಗೊಡ ಪರಮಾನಂದೇಶ್ವರ, ಮುಂತಾದ ಶರಣರು ದಾಸರು ತತ್ವಪದಕಾರರು ಸೂಫಿಗಳೂ ಹೀಗೆ ಈ ಸಗರನಾಡಿನ ಸಾಹಿತ್ಯ ಪರಂಪರೆ ಬೆಳೆಯುತ್ತ ಬಂದಿದೆ.

ಸಗರನಾಡಿನಲ್ಲಿ ಶಾಸನ ಸಂಪತ್ತು ಹೇರಳವಾಗಿದೆ. ಅದು ಅಲ್ಲಿಯ ಇತಿಹಾಸ ಸಂಸ್ಕೃತಿಯನ್ನು ಅಭ್ಯಾಸಿಸಲು ತವನಿಧಿ ಈ ನಾಡಾಗಿದೆ. ಸಾಹಿತ್ಯ, ಕಲೆ, ಧರ್ಮವಾಸ್ತುಶಿಲ್ಪ ಸುಮಾರು 1500 ವರ್ಷಗಳ ಸುಧೀರ್ಘ ಇತಿಹಾಸವಿರುವ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸಗರನಾಡಿನ ಸಾಹಿತ್ಯವೂ ಕೂಡ ಹಳೆಗನ್ನಡ ಹಾಗೂ ವಚನ ಸಾಹಿತ್ಯಕ್ಕೆ ಅಪಾರ ಕೊಡುಗೆ ಸಲ್ಲಿಸಿದದ್ದು ಇಂತಂಹ ನಾಡಿನ ಸಾಹಿತ್ಯವನ್ನು ಗಮನದಲ್ಲಿಟುಕೊಂಡು ಸಗರನಾಡಿನ ಶರಣರ ಅನುಭವ ಸಾಹಿತ್ಯ ಮತ್ತು ಅವರ ಜೀವನ ಸಾಧನೆಯೊಂದಿಗೆ ಅವರ ನಿಲುವು ಒಲವು, ಧೈರ್ಯ–ಸಾಹಸ, ಸ್ವಭಾವ ಇತ್ಯಾದಿ ಗುಣಗಳು ತಮ್ಮ ಸಾಹಿತ್ಯ ಪ್ರಕಾರಗಳ ಮೂಲಕ ಹೊರಹೊಮ್ಮಿರುವುದನ್ನು ಕಾಣಬಹುದಾಗಿದೆ. ಸಗರನಾಡಿನ ಶರಣರ ಜೀವನ ಅವರು ಸಾಹಿತ್ಯಕ್ಕೆ ನೀಡಿರುವ ಅಪ್ರತಿಮ ಕೊಡುಗೆ ಅವರು ಅನುಸರಿಸಿದ ಅಧ್ಯಾತ್ಮ ಮಾರ್ಗ ಅವರು ಸಮಾಜದಲ್ಲಿಯ ಅನೇಕ ಡೊಂಕುಗಳನ್ನು ತಿದ್ದುವಲ್ಲಿ ತೋರಿದ ಜಾಣ್ಮೆ, ಪಟ್ಟ, ಶ್ರಮ ಇಂದಿನ ಪೀಳಿಗೆಗೆ ಆದರ್ಶಮಯವಾಗಿ ತೋರುವುದರಿಂದ ಶರಣರ ಜೀವನಮೌಲ್ಯಗಳ ಬಗ್ಗೆ ತಿಳಿದುಕೊಳ್ಳುವುದು ಇಂದಿನ ಅಭ್ಯಾಸಿಗಳಿಗೆ ಅವಶ್ಯಕವಾಗಿದೆ. ಹೀಗಾಗಿ ಸಗರನಾಡಿನ ಶರಣರ ಸಾಹಿತ್ಯದ ಕುರಿತು ಅಧ್ಯಯನ ಇಂದಿನ ಅಗತ್ಯವಾಗಿದೆ.

ಸಮಾಜದಲ್ಲಿ ಸಮಾನತೆ, ಸ್ವಯಂಪೂರ್ಣತೆ, ಶ್ರಮಗೌರವ–ಗುಣಗೌರವಗಳನ್ನು ಸ್ಥಾಪಿಸಿದಂತೆ ಸಿದ್ಧಾಂತದಲ್ಲಿ ಸಮನ್ವಯವನ್ನು ಸಾಧಿಸಿದರು ಶರಣರು. ಅವರು ರೂಪಿಸಿಕೊಂಡ ಸಾಧನ–ಸೋಪಾನ ಷಟ್‌ಸ್ಥಲಗಳಲ್ಲಿ ಭಕ್ತಮಹೇಶ ಸ್ಥಲಗಳು ಭಕ್ತಿಯನ್ನು ದ್ವೈತವನ್ನು ಪ್ರಸಾದಿ ಪ್ರಾಣಲಿಂಗಿ ಸ್ಥಲಗಳು ಜ್ಞಾನವನ್ನೂ ವಿಶಿಷ್ಟಾದ್ವೈತವನ್ನೂ ಶರಣ ಮತ್ತು ಐಕ್ಯಸ್ಥಲಗಳು ವೈರಾಗವನ್ನೂ ಅದ್ವೈತವನ್ನೂ ಸೂಚಿಸುತ್ತವೆ ಎಂದು ಪಂಡಿತ್ತೋತಮರಾದ ಡಾ.ಶಿ. ನಂದೀಮಠರು ವಿವರಿಸಿದ್ದಾರೆ.

***"ಸುಲಿದ ಬಾಳೆಯ ಹಣ್ಣಿನಂದದಿ***
***ಕಳೆದ ಸಿಗುರಿನ ಕಬ್ಬಿನಂದದಿ***
***ಅಳೆದ ಉಷ್ಣದ ಹಾಲಿನಂದದಿ ಸುಲಭವಾಗಿರುವ***
***ಲಲಿತವಹ ಕನ್ನಡದ ನುಡಿಯಲಿ***
***ತಿಳಿದು ತನ್ನೊಳು ತನ್ನ ಮೋಕ್ಷವ***
***ಗಳಿಸಿಕೊಂಡರೆ ಸಾಲದ ಸಂಸ್ಕೃತದಲಿನ್ನೇನು?"***

ಸಂಸ್ಕೃತ ಭಾಷೆಗೆ ತಿಲಾಂಜಲಿಯನ್ನಿತ್ತು ಕನ್ನಡ ಭಾಷೆಗೆ ಆದ್ಯತೆ ನೀಡುವ ಕಾಲ ಆದಾಗಿತ್ತು. ಅಂತಹ ಜನಸಾಮನ್ಯರು ಆಡುವ ಕನ್ನಡ ಭಾಷೆಯಲ್ಲಿ ವಚನಗಳನ್ನು ರಚಿಸಿ ಅಂತರಂಗದ ಅನುಭವವನ್ನು ಬಿಚ್ಚಿ ಇಟ್ಟರು ನಮ್ಮ ಶಿವಶರಣರು. ಈ ಪರಂಪರೆಯಲ್ಲಿ ಮೊಟ್ಟ ಮೊದಲಿಗರು ಮುದನೂರಿನ ಜೇಡರ ದಾಸಿಮಯ್ಯನವರು ವಚನ ರಸವಾಹಿನಿಗೆ ಗಂಗೋತ್ರಿಯಾಗಿ ವಿಪುಲವಾದ ವಚನ ಸಾಹಿತ್ಯ ಸಾಗರಕ್ಕೆ ಮೂಲಸೆಲೆ ಜೇಡರ ದಾಸಿಮಯ್ಯ ಈತ ಬಸವಪೂರ್ವಯುಗದವನು,

[5] ಶಹಾಪುರ ದರ್ಶನ ಪು.ಸಂ.15

ಅಲ್ಲದೆ ಮುಂದೆ ಬಂದ ಬಸವಾದಿ ವಚನಕಾರರಿಗೆ ಈತನ ವಚನಗಳು ಸ್ಫೂರ್ತಿ ನೀಡಿವೆ. ಜೇಡರ ದಾಸಿಮಯ್ಯನವರು ಸಗರನಾಡಿನ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಮುದನೂರಿನವರು.

ಕನ್ನಡ ಸಾಹಿತ್ಯಕ್ಕೆ ಸಗರನಾಡಿನ ಸಾಹಿತ್ಯ ಮೂಲ ಬೇರಾಗಿದ್ದು. ಈ ನಾಡಿನ ಕೊಡುಗೆ ಹಿರಿದಾಗಿದೆ. ನಾವು ಮನುಷ್ಯರಾಗಿ ಮಾನವರಾಗಿ ನಮ್ಮಂತೆ ಇನ್ನೊಬ್ಬರು ನಾವೆಲ್ಲರೂ ಒಂದು ನಮ್ಮ ಸಂಪತ್ತು ನನಗಾಗಿ ಅಲ್ಲ, ನಮಗಾಗಿ ಅನ್ನುವುದನ್ನು ಬಾಳಿ ಬೆಳಗಿದ ಅವರ ಹಿಂದಿನ ಕಾಲ ನಮಗೆ ತಿಳಿಸುತ್ತದೆ. ಆ ಕಾಲದ ಶೂರತನ ಧೀರತನ ಭೋಗ–ತ್ಯಾಗ, ಮುಕ್ತಿ, ಮಾರ್ಗದ ಪ್ರಭಾವ ಪಡೆಯುತ್ತೇವೆ. ಇಂದಿನ ಪ್ರಕ್ಷುಬ್ಧ ಸ್ಥಿತಿಯಲ್ಲಿ ಸಗರನಾಡಿನ ಸಂಸ್ಕೃತಿ ಸಾಹಿತ್ಯ ಮಾನವ ಕುಲಕೋಟಿಗೆ ದಾರಿದೀಪವಾಗಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಅಕ್ಕಿ ಡಿ.ಎಸ್. (1996). *ಸಗರನಾಡ ಸಿರಿ.* ಕವಿಕುಂಚ ಪ್ರಕಾಶನ.
- ಅಬ್ದುಲ್ ಕರೀಂ. *ಸಗರನಾಡು ಸಂಸ್ಕೃತಿ ಸಮೀಕ್ಷೆ.* ದರ್ಶನ ಪ್ರಕಾಶನ.
- ಈಶ್ವರಯ್ಯ ಮಠ. *ಗಿರಿಸಂಪದ.* ದರ್ಶನ ಪ್ರಕಾಶನ.
- ಕಲಬುರಗಿ ಎಂ.ಎಂ. (2004). *ಮಾರ್ಗ.* ಸಂ.4, ಸಪ್ನ ಬುಕ್ ಹೌಸ್.
- ಸೂಗಯ್ಯ ಹಿರೇಮಠ. (1994). *ಶಹಾಪುರ ದರ್ಶನ.* ದರ್ಶನ ಪ್ರಕಾಶನ.
- ಶಿವಾನಂದ. (1967). *ಸಗರನಾಡಿನ ಶಿವಶರಣರು.* ದರ್ಶನ ಪ್ರಕಾಶನ.